

ಸಂತೋಷ ಸಸಿಹಿತ್ಲು

# ಹಬ್ಬ

ಹೂವು ಅರಳಿ ನಿಂದಿದೆ
ದುಂಬಿ ಹಾರಿ ಬಂದಿದೆ
ಬಿಸಿಲು ಮಳೆಯು ಕೂಡಿದೆ
ಮಳೆಯ ಬಿಲ್ಲು ಮೂಡಿದೆ!

ಕರಿ ಮೋಡದ ಸಂಚಿದೆ
ಗುಡುಗು ಸಿಡಿಲು ಮಿಂಚಿದೆ
ಬೆಕ್ಕಿನ ಮೈ ಅದುರಿದೆ
ನಾಯಿ ಬಾಲ ಮುದುರಿದೆ!

ಹನಿ ಹನಿ ಮಳೆ ಉದುರಿದೆ
ನವಿಲು ಗರಿಯ ಕೆದರಿದೆ
ಹಸಿರು ಸುತ್ತುವರೆದಿದೆ
ರಾಣಿಯಂತೆ ಮೆರೆದಿದೆ!

ಹಕ್ಕಿ ಹಾರಿ ದಣಿದಿದೆ
ಮನವು ಹಿಗ್ಗಿ ಕುಣಿದಿದೆ
ಚೆಲುವು ಕಣ್ಣ ಹಿಡಿದಿದೆ
ಹಬ್ಬದೂಟ ನಡೆದಿದೆ!

■ ರಾಜಶೇಖರ ಕುಕ್ಕುಂದಾ



## ಕುಂಚ ಪ್ರಪಂಚ



**ಎಚ್.ಎನ್. ನಲ್ಮೆ**
2ನೇ ತರಗತಿ,
ಎಸ್.ಎನ್.ಐ.ಎಸ್.
ಹೊಸದುರ್ಗ
ಚಿತ್ರದುರ್ಗ ಜಿಲ್ಲೆ







**ಕುವಲ್ ಯೋಗೇಶ**
2ನೇ ತರಗತಿ,
ಶ್ರೀ ವಾಣಿ ವಿದ್ಯಾಕೇಂದ್ರ
ಬೆಂಗಳೂರು